ಮೊಮ್ಮಗ, ಮೀಸೆ ಅಣ್ಣಯ್ಯ ದೊಡ್ಡಚಡ್ಡಿಯಲ್ಲಿ ಬರಿಮೈಯಲ್ಲಿ ಎದ್ದು ಬಂದ... ಪುಟ್ಟಲಕ್ಷ್ಮಿಯನ್ನು ತನ್ನ ದೊಡ್ಡಬೈಕಿನಲ್ಲಿ ಕೂರಿಸಿಕೊಂಡು ಇಡೀ ಕಾಡು ಪ್ರತಿಧ್ವನಿಸುವಂತಹ ಶಬ್ದ ಮಾಡುತ್ತ ಒಂದು ವರ್ಷ ಓಡಾಡಿದ್ದವನ ವರ್ಷಗಳ ನಂತರವೇ ನೋಡಿದ್ದಳು... ಬಾವಿಗೆ ಬಿದ್ದಳೋ... ತಳ್ಳಿದರೋ... ತಿಳಿಯಲಾರದ ಹೊಳೆಯಲಾರದ ಯಾರೂ ಮಾತನಾಡಲಾರದ ಅವಳ ಹೆಸರನ್ನು ಹೇಳಲು ಹೆದರುವಂತಹ ಒಂದು ಅನಿಷ್ಟ ಕಗ್ಗಂಟಿನ ಸ್ಥಿತಿಯನ್ನು ಕಾಡಿನ ಆ ಜಾಗದಲ್ಲೂ ಎಲ್ಲರ ಮನಸ್ಸಿನಲ್ಲೂ ಸೃಷ್ಟಿಸಿದ್ದ ಪುಟ್ಟಲಕ್ಷ್ಮಿಯ ಸಾವು ಒಮ್ಮೆಲೆ ನೆನಪಾಯಿತವಳಿಗೆ...

ಬೈಕಿನ ಮುಂದೆ ಸುಮ್ಮನೇ ಹಟ ಮಾಡುತ್ತ ಚೀರುತ್ತಿದ್ದವಳ ಈತನೇ ತನ್ನ ಎಡಗೈಯಲ್ಲಿ ಬೈಕನ್ನು ಬಿಡುತ್ತಲೇ ಹುಳವನ್ನು ಎತ್ತಿ ಎಸೆದಂತೆ ಎಸೆದಿರಬೇಕು ಅಂತನ್ನಿಸಿಬಿಟ್ಟಿತವಳಿಗೆ... ಪುಟ್ಟಲಕ್ಷ್ಮಿಯ ಸಾವು, ಆತ್ಮಹತ್ಯೆ ಅಂತೆಲ್ಲ ಶಾಲೆಯ ಆ ದಿನ ಮಾತನಾಡುವಾಗ... ಹುಟ್ಟಿಕೊಂಡ ಆತ್ಮಹತ್ಯೆ ಅನ್ನುವ ಪದ, ಪೀಡೆಯಂತೆ, ಒಂದು ಕೀಳಿನಂತೆ, ಒಂದು ಉಪದ್ರದಂತೆ ಬೆಳೆಯುತ್ತಲೇ ಅವಳ ವೈಜ್ಞಾನಿಕ ಮನೋಭಾವದ ನಡುವೆಯೂ ಅರಗದ ಕಲ್ಲಿನಂತೆ ಉಳಿದುಬಿಟ್ಟಿತ್ತು.

### 4

'ಪ್ರಶಾಂತ ಮಾಮ ಜೋಕಾಲಿ ಆಡುತ್ತಿದ್ದ ಅಂತ ಅಂದಿದ್ದೆನಂತೆ. ಆಗ ಅಮ್ಮ ಚಿಟ್ಟನೆ ಚೀರುತ್ತಿದ್ದಳಂತೆ' ಅಂದಿದ್ದಳು ವೈಶಾಲಿ ಹೊಸ ಕನ್ನಡಸಾಲಿ ಮಾಸ್ತರರ ಬಳಿ. ಅವರು ಕೆನ್ನೆಗೈಯಾಗೆ ಅವಳ ಎಲ್ಲಾ ಮಾತು ಕೇಳುತ್ತಿದ್ದರು. ನಿಮ್ಮನೆಯಲ್ಲಿ ಎಷ್ಟು ಜನ ಅಂತ ಶುರುವಾದ ಪ್ರಶ್ನೆ ಎಲ್ಲಿಗೋ ಕೊಂಡೊಯ್ದಿತ್ತು. ನಮ್ಮಮ್ಮನ ಹೊಟ್ಟೇಲಿ ನನಗಿಂತ ಮುಂಚೆ ಗಂಡು ಮಗು ಹುಟ್ಟಿತ್ತಂತೆ. ದೈಯ್ಯದ ಶಾಪಾನೋ ಎಂಥದ್ದೋ ಅದೂ ಸತ್ತ್ ಹೋಯ್ತಂತೆ– ಅಂದಿದ್ದವಳು ಆ ಟಾಪಿಕ್ಕನ್ನು ಮತ್ತೆ ಮನೆಯಲ್ಲಿ ತೆರೆದಿದ್ದಳು. ಅಮ್ಮ ಅವಳಿಗೆ ಸತ್ತು ಹೋದ ವೈಶಾಲಿಯ ಅಣ್ಣನ ಬಗ್ಗೆ ಹೇಳಿದ್ದೂ, ಅಪ್ಪ ಆ ಬಗ್ಗೆ ಹೇಳಿದ್ದೂ, ವೈಶಾಲಿಯ ಅಮ್ಮನ ಸದಾ ಬೈಯುವ ದೂರದ ಹಳ್ಳಿಯ ದಡಮ್ಮ ಅದರ ಬಗ್ಗೆ ಹೇಳಿದ್ದೂ, ಅವಳ ಸಹಪಾಠಿಗಳ ಕಿವಿಗೆ ಅವರವರ ಅಮ್ಮಂದಿರು ಮಾತಾಡಿದ್ದು ಹೇಳಿದ್ದೂ ಎಲ್ಲದೂ ಬೇರೆ ಬೇರೆಯಾಗಿತ್ತು. ವೈಶಾಲಿಗೆ ಈ ಹಳೆಯ ಕಥೆಗಳ ಕುರಿತು ಒಂಥರ ಬೇಸರ ಅನುಮಾನ ಎರಡೂ ಹುಟ್ಟಿಕೊಂಡಿತ್ತು. ನಡೆದುದೆಲ್ಲವೂ ಕನಸಾಗಿ ಕರಗಿ ಹೋಗುತ್ತದೆ, ಅದರ ಬಗ್ಗೆ ಹೆಚ್ಚು ಚಿಂತೆ ಮಾಡಬಾರದು ಎನ್ನುವ ನಿಲುವಿಗೆ ಬಂದಿದ್ದಳು. ಆದರೆ, ನನ್ನ ಮನೆಯಲ್ಲಿ ಈಗ ನಾನು, ನನ್ನ ಅಪ್ಪಯ್ಯ, ನನ್ನ ಆಯಿ. ಇರೋದು ಸಾರ್... ನನ್ನ ಅಣ್ಣ ಹೆರಿಗೆ ಆಗೂಹೊತ್ತೆ ಸೆತ್ತ್ ಹೋನಂತೆ... ಅಂದು ಮುಗಿಸಿದವಳು... ನನ್ನ ಮಾಮಾ ಪ್ರಶಾಂತ ಇದ್ದನಂತೆ. ಅವನೂ ಸೆತ್ತ್... ಹೋ... ಅಂತಾ ಶುರುಮಾಡಿದವಳು ಹೋ ಅಂತಲೇ ಅಳುತ್ತ ಅಳು ನಿಲ್ಲಿಸದೇ ಮನೆಗೆ ಯಾರೊಟ್ಟಿಗೋ ಕಳುಹಿಸಲ್ಪಟ್ಟು ಅಲ್ಲೂ ಹೋ ಅನ್ನುವುದನ್ನು ಮುಂದುವರೆಸಿದ್ದಳು. ಎಲ್ಲ ಐದನೆಯತ್ತೆ ಅಕ್ಟೋಬರ್ ರಜೆ ಸಮೀಪದ ಮಧ್ಯವಾರ್ಷಿಕ ಪರೀಕ್ಷೆಯ ಸುತ್ತಲಿನ ಕಥೆ. ಗೆಳತಿ ರಾಣಿ, ಜಯಾ, ಕಮಲ ಕಡೆಯಿಂದ ಸಂಗ್ರಹಿಸಿದ ಮಾಹಿತಿ ಪ್ರಕಾರ ತನ್ನ ಲಾರಿ ಡ್ರೈವರ್ ಪ್ರಶಾಂತ್ ಮಾಮಾನೇ ಪುಟ್ಟಲಕ್ಷ್ಮಿಯ ತಂದೆಯಂತೆ. ಆ ಪ್ರಕಾರ ಇಬ್ಬರೂ ಸಂಬಂಧಿಕರಂತೆ. ಈಗ ಒಂದೇ ಜಾತಿಯವರಂತೆ. ಅವರು ಇವರ ಮನೆ ಹೋಗಿ ಬರಬಹುದಂತೆ. ಹೀಗೀಗೇ... ಉಚ್ಚೆ ಹೊಯ್ಯಲು ಬಿಟ್ಟಾಗ ಮರಗಳ ಹಿಂದೆ ಪೊದೆಗಳ ಪಕ್ಕದಲ್ಲಿ ಬೇಲಿ ಸಾಲುಗಳಲ್ಲಿ ಮಾತುಗಳು ಓಡಾಡಿದವು. ಕತ್ಲೆಕಾನಿನ ಅತಿಸುಂದರಿಯಂತೆ ಪುಟ್ಟಲಕ್ಷ್ಮಿಯ ಅಮ್ಮ. ವೈಶಾಲಿಯ ಮಾಮ ಅವಳನ್ನು ಲವ್ ಮಾಡಿ, ಲವ್ ಮಾಡಿ, ಲವ್ ಮಾಡಿ, ಓಡಿಸಿಕೊಂಡು ಹೋಗಿ ಗೋವಾದಲ್ಲಿ ಮದುವೆಯಾದನಂತೆ. ಆಗ ಬರುವಾಗ ಪುಟ್ಟಲಕ್ಷ್ಮಿಯ ಕರೆದುಕೊಂಡು ಬಂದರಂತೆ. ಯಾರೇ ಗೋವಾಗೆ ಹೋದರೂ ಮಗು ಕರೆದುಕೊಂಡು ಬರುತ್ತಾರಂತೆ. ಹೋಗುವಾಗ ಎರಡು ಜಾತಿ ಬರುವಾಗ ಒಂದೇ ಜಾತಿ ಆಗುತ್ತಾರಂತೆ. ಹೊನ್ನಾವರದ ಅಪ್ಪನ ದೊಡ್ಡಮ್ಮನ ಮನೆ ಎಂದು ದೂರ ದೂರ ದೂರ ಪ್ರಯಾಣ ಮಾಡಿ ಅಕ್ಟೋಬರ್ ರಜೆಯನ್ನು ನಿಜವಾದ ರಜೆಯಂತೆ ಕಳೆದು ಶಾಲೆಯ ಗೆಳತಿಯರ ಮಾಹಿತಿಯನ್ನು ಕಥೆಯನ್ನಾಗಿ ಬೆಳೆಸಿಕೊಂಡು ಬಂದ ವೈಶಾಲಿಗೆ ಈಗ ದೊಡ್ಡಜ್ಜಿಯ ದೊಡ್ಡ ಮನೆಯ ಅಟ್ಟದಲ್ಲಿನ ದೆವ್ವಗಳೂ ಜೊತೆಗೇ ಬಸ್ಸಿನಲ್ಲಿ ಮನೆಗೆ